ಅಧ್ಯಕ್ಷರು: ತಮ್ಮ ಪ್ರಶ್ನೆ ಬಹಳ simple ಆಗಿದ್ದು, ಈ ಯೋಜನೆ ಇಡೀ ರಾಜ್ಯಕ್ಕೆ ಅನ್ವಯವಾಗಬೇಕೆಂದು ಇದೆ. ಅದಕ್ಕೆ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ, ತಾವು ಕುಳಿತುಕೊಳ್ಳಿ.

ಶ್ರೀ ಎನ್ ಎ ಹ್ಯಾರಿಸ್: ನೀವು ಈ ರೀತಿ ಹೇಳಿದರೆ ನಾವು ಏಕೆ ಪ್ರಶ್ನೆಯನ್ನು ಕೇಳಬೇಕು?

ಅಧ್ಯಕ್ಷರು: ಆಯಿತು.

ಶ್ರೀ ಎನ್ ಎ ಹ್ಯಾರಿಸ್: ಏನು ಆಯಿತು? ನಾವು ಏನು ಹೇಳಿದರೂ ತಾವು ಆಯಿತು, ಆಯಿತು, ಎನ್ನುತ್ತೀರಿ.

ಅಧ್ಯಕ್ಷರು: ನಿಯಮದ ಪ್ರಕಾರ ನಾನು ಕರೆದರೆ ಮಾತ್ರ ಪ್ರಶ್ನೆಯನ್ನು ಕೇಳಬೇಕಾಗಿದೆ. ನಾನು ನಿಮ್ಮನ್ನು ಕರೆದಿಲ್ಲ, ನಿಮ್ಮ ಇಷ್ಟಕ್ಕೆ ಎದ್ದು ನಿಂತು ಪ್ರಶ್ನೆಯನ್ನು ಕೇಳಬಹುದಾ? ನಾನು ನಿಮ್ಮನ್ನು ಕರೆದಿದ್ದೆನಾ? ನೀವು rules ಮಾತನಾಡಿದರೆ, ನಾನು rules ಮಾತನಾಡಬೇಕಾಗುತ್ತದೆ. ನಾನು ನಿಮ್ಮ ಹೆಸರನ್ನು ಹೇಳಿದರೆ ನೀವು ಕೇಳಬೇಕು. ನಾನು ಕರೆದರೆ ನೀವು ಪ್ರಶ್ನೆಯನ್ನು ಕೇಳಬೇಕು, ನಾನು ನಿಮ್ಮನ್ನು ಕರೆದಿಲ್ಲವಲ್ಲಾ, ನಾನು ಕರೆಯದೇ ನೀವು ಏಕೆ ಎದ್ದು ನಿಲ್ಲುತ್ತೀರಿ?

(ಗೊಂದಲ)

ಶ್ರೀ ಯು ಟಿ ಖಾದರ್: ಮಾನ್ಯ ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ಪ್ರಥಮ ಬಾರಿ ಸದಸ್ಯರಾದವರಿಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಬೇಡಿಕೆಗಳ ಮೇಲೆ ಮಾತನಾಡುವಾಗ ಕೇಳಿ.

ಅಂಗವಿಕಲ ವೇತನ ಮಂಜೂರಾತಿಗೆ ವಾರ್ಷಿಕ ಆದಾಯ ನಿಗದಿ ಪಡಿಸುವ ಬಗ್ಗೆ.

58(395) ಶ್ರೀ ಅಭಯ ಚಂದ್ರ ಜೈನ್ ಕೆ:(ಮೂಡಬಿದ್ರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗವಿಕಲ ವೇತನ ಮಂಜೂರಾತಿಗಾಗಿ ವಾರ್ಷಿಕ ಆದಾಯ ರೂ.6000 ನಿಗಧಿಪಡಿಸಿವುದರಿಂದ ಬಡ ಅರ್ಹರಿಗೆ ವೇತನ ಪಡೆಯಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ವಾರ್ಷಿಕ ಆದಾಯವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆಯೇ ಹಾಗೂ ಪ್ರಕ್ರಿಯೆ ಯಾವ ಹಂತದಲ್ಲಿದೆ?

ಶ್ರೀ ಪಿ ಎಂ ನರೇಂದ್ರ ಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಹೌದು

ಆ) ಶೇ.75 ಕ್ಕಿಂತ ಹೆಚ್ಚಿನ ಅಂಗವಿಕಲತೆಯುಳ್ಳವರಿಗೆ ಮಾಸಾಶನ ಮಂಜೂರು ಮಾಡಲು ವಾರ್ಷಿಕ ವರಮಾನ ಮಿತಿಯನ್ನು ರೂ.20,000/- ಗಳಿಗೆ ಹಾಗೂ ಶೇ.40 ರಿಂದ ಶೇ.75 ರೊಳಗಿನ ಅಂಗವಿಕಲತೆ ಹೊಂದಿದವರಿಗೆ ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳಿಗೆ ನಿಗಧಿಪಡಿಸಿರುವ ಆದಾಯ ಮಿತಿ ಅಂದರೆ ಗ್ರಾಮೀಣ ಪ್ರದೇಶದಲ್ಲಿ ರೂ.11,500/- ಮತ್ತು ನಗರ ಪ್ರದೇಶದಲ್ಲಿ ರೂ.17,000/- ಗಳಿಗೆ ನಿಗಧಿಪಡಿಸುವ ಬಗ್ಗೆ 2009-10ನೇ ಸಾಲಿನಲ್ಲಿ ಪರಿಶೀಲಿಸಿ ತಿರಸ್ಕರಿಸಿದೆ.

ಶ್ರೀ ಕೆ ಅಭಯ ಚಂದ್ರ ಜೈನ್: ಮಾನ್ಯ ಅಧ್ಯಕ್ಷರೆ, ನಾನು ಅಂಗವಿಕಲ ವೇತನ ಮಂಜೂರಾತಿಗಾಗಿ ವಾರ್ಷಿಕ ಆದಾಯ ರೂ.6,000 ನಿಗದಿಪಡಿಸಿರುವುದರಿಂದ ಬಡ ಅರ್ಹರಿಗೆ ವೇತನ ಪಡಿಯಲು ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದೆ ಅದಕ್ಕೆ ಸರ್ಕಾರದಿಂದ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳುತ್ತಾರೆ. ಈ ವಾರ್ಷಿಕ ಅದಾಯವನ್ನು ಹೆಚ್ಚು ಮಾಡುವ ಪ್ರಸ್ತಾವನೆ ಇದೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದು, ಅದಕ್ಕೆ ಇಲ್ಲವೆಂದು ಉತ್ತರ ನೀಡಲಾಗಿದೆ. ಇವತ್ತು ಶೆ.75ರಷ್ಟು ಇರುವ ಅಂಗವಿಕಲರಿಗೆ ವಾರ್ಷಿಕ ಆದಾಯ ರೂ.6,000 ಮಾಡಿರುವುದರಿಂದ ಯಾರಿಗೂ ಅಂಗವಿಕಲ ವೇತನ ಸಿಗುತ್ತಿಲ್ಲ. ಆದುದರಿಂದ

ಸರ್ಕಾರ ಅವರ income limit ಅನ್ನು ಹೆಚ್ಚು ಮಾಡುವ ಕೆಲಸವನ್ನು ಮಾಡಬೇಕು. ಇದು ನನ್ನ ನಮ್ರವಾದಂಥ ವಿನಂತಿಯಾಗಿದೆ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಉತ್ತರಲ್ಲಿ ತಿಳಿಸಲಾಗಿದೆ.

ಶ್ರೀ ಎನ್ ಎ ಹ್ಯಾರಿಸ್: ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು: ತಾವು ದಯವಿಟ್ಟು ಕುಳಿತುಕೊಳ್ಳಿ, ಬೇರೆ ಪ್ರಶ್ನೆ ಕೇಳುವಾಗ ನೀವು ಈ ರೀತಿ ಮಧ್ಯೆ ಎದ್ದು ನಿಂತು ಕೇಳುವುದಾದರೆ ಸದನವನ್ನು ನಡೆಸುವುದಕ್ಕೆ ಆಗುವುದಿಲ್ಲ. ದಯವಿಟ್ಟು ನಾನು ವಿನಂತಿ ಮಾಡುತ್ತಿದ್ದೇನೆ, ತಾವು ಕುಳಿತುಕೊಳ್ಳಿ. ಮಾನ್ಯ ಸಚಿವರೆ, ತಾವು ಉತ್ತರ ಹೇಳಿ. ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡುತ್ತೇನೆ. ಈ ರೀತಿ ಮಧ್ಯದಲ್ಲಿ ಎದ್ದು ನಿಂತು ಕೇಳಿದರೆ ಸದನವನ್ನು ಹೇಗೆ ನಡೆಸುವುದು? ಮಾನ್ಯ ಸದಸ್ಯರು ಒಂದು simple ಪ್ರಶ್ನೆಯನ್ನು ಕೇಳಿದ್ದಾರೆ. ಈ ರೀತಿ ಆದರೆ ಚೆನ್ನಾಗಿರುವುದಿಲ್ಲ, ಅವರನ್ನು ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ಸಿದ್ದರಾಮಯ್ಯ: ಅವರಿಗೆ ಒಂದು ಪ್ರಶ್ನೆ ಕೇಳಲು ಅವಕಾಶ ಕೊಡಿ.

ಅಧ್ಯಕ್ಷರು: ಅವರ ಪ್ರಶ್ನೆ ಮುಗಿದು, ಮುಂದಿನ ಪ್ರಶ್ನೆಗೆ ಹೋಗಿದ್ದೇನೆ, ಆದರ ಉತ್ತರವೂ ಆಗಿದೆ ಈಗ ಮಧ್ಯದಲ್ಲಿ ಎದ್ದು ನಿಂತು ಕೇಳಿದರೆ ಹೇಗೆ? ಇದು ಸರಿಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: Supplimentary ಪ್ರಶ್ನೆಗೆ ಅವಕಾಶ ಕೊಡಿ.

ಅಧ್ಯಕ್ಷರು: ಈಗ ಮುಂದಿನ ಪ್ರಶ್ನೆಗೆ ಹೋಗಿದ್ದು ಅದು ಅರ್ಧದಲ್ಲಿ ಇದೆ.

ಶ್ರೀ ಎನ್ ಎ ಹ್ಯಾರಿಸ್: ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು: ತಾವು ಕುಳಿತುಕೊಳ್ಳಿ, ಬೇಡಿಕೆ ಮೇಲೆ ಮಾತನಾಡುವಾಗ ಹೇಳಿ.

ಶ್ರೀ ಸಿದ್ದರಾಮಯ್ಯ: ನೀವು ಯಾರಿಗೂ ಬಗ್ಗುವುದಿಲ್ಲ.

ಅಧ್ಯಕ್ಷರು: ಅವರಿಗೆ ನಾನು ಮೂರು ಬಾರಿ ಅವಕಾಶಗಳನ್ನು ಕೊಟ್ಟಿದ್ದೇನೆ.

Dr H C MAHADEVAPPA: Speaker is becoming strong day by day.

ಅಧ್ಯಕ್ಷರು: ಅವರಿಗೆ ಮೂರು ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಕೊಟ್ಟಿದ್ದೇನೆ ಕೇಳಿದ್ದಾರೆ. ಮಂತ್ರಿಗಳೆ, ತಾವು ಉತ್ತರ ಹೇಳಿ.

12-140 ಪಿ.ಎಂ.

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ನಿಮ್ಮ ಇಷ್ಟ ಪ್ರಕಾರ ಎದ್ದು ಎದ್ದು ಕೇಳುತ್ತೀರಿ. No. ಈ ತರಹ ಎದ್ದು ನಿಮ್ಮ ಇಷ್ಟ ಪ್ರಕಾರವೇ ಮಾಡುವುದಾದರೆ rules ಏಕೆ ಬೇಕು? ನೀವು ಎದ್ದು ಏನು ಬೇಕಾದರೂ ಕೇಳಬಹುದೇ? Please, ಕುಳಿತುಕೊಳ್ಳಿ. Otherwise I will name you.

(ಗೊಂದಲ)

ಅಧ್ಯಕ್ಷರು: ಈಗ ದಯವಿಟ್ಟು ಕುಳಿತುಕೊಳ್ಳಿ. No.

ಶ್ರೀ ಎನ್ ಎ ಹ್ಯಾರಿಸ್: ಮತ್ತೆ ಯಾವ ತರಹ? ನಾವು ಪ್ರಶ್ನೆ ಕೇಳುವುದು ಏಕೆ?

ಅಧ್ಯಕ್ಷರು: No. ಮಂತ್ರಿಯವರೆ ಉತ್ತರ ಹೇಳಿ.

ಶ್ರೀ ಪಿ ಎಂ ನರೇಂದ್ರಸ್ವಾಮಿ: ಸರ್ಕಾರದ ನಿಲುವು ಏನು, cabinet ನಿಲುವು ಏನು ಎನ್ನುವುದನ್ನು ಈಗಾಗಲೇ ತಿಳಿಸಲಾಗಿದೆ. ಅದರಂತೆ ತಿರಸ್ಕರಿಸಲಾಗಿದೆ.

ಶ್ರೀ ಎನ್ ಎ ಹ್ಯಾರಿಸ್: ವಾಜಪೇಯಿ ಆರೋಗ್ಯಶ್ರೀ ಯೋಜನೆಯಲ್ಲಿ BPL card holders ಗೆ ಮಾತ್ರ ಅನುಕೂಲ ಸಿಗುತ್ತದೆ. ದಯವಿಟ್ಟು ಇದನ್ನು ಎಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. BPL card ಎಲ್ಲಾ ಕಡೆ ಹಂಚಿಕೆಯಾಗಿಲ್ಲ. ಈ ಸತ್ಯ ಎಲ್ಲರಿಗೂ ಗೊತ್ತಿದೆ. ಕೇವಲ 15 ಸಾವಿರ

ರೂಪಾಯಿಗಳ income limit ಇದೆ. ಅಂದರೆ, ತಿಂಗಳಿಗೆ 1250 ರೂಪಾಯಿಗಳ income ಇರುವಂಥವರಿಗೆ ಮಾತ್ರ BPL Card ಕೊಡುತ್ತಿದ್ದಾರೆ. 1250 ರೂ. ಎಂದರೆ ದಿವಸಕ್ಕೆ 40 ರೂಪಾಯಿಗಳಾಗುತ್ತದೆ. ಈ ಕಾಲದಲ್ಲಿ ಅಷ್ಟು ಹಣದಲ್ಲಿ ಯಾರೂ ಬದುಕಲಿಕ್ಕೆ ಸಾಧ್ಯವಿಲ್ಲ. ಆದ್ದರಿಂದ, income limit ಅನ್ನು ಹೆಚ್ಚಳ ಮಾಡಿ BPL card ಎಲ್ಲಾ ಕಡೆ ಸಿಗುವಂತಾಗಬೇಕು. Bangalore City ಯಲ್ಲಿ card ಹಂಚಿಕೆ ಸರಿಯಾಗಿ ಆಗಿಲ್ಲ. ಈ ಬಗ್ಗೆ ಚರ್ಚಿಸಲು ನಾವು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಿದ್ದೇವೆ. ಇದನ್ನು ದಯವಿಟ್ಟು ತಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಅರ್ಧ ಗಂಟೆ ಚರ್ಚೆಗೆ ಕೇಳಿ.

ಶ್ರೀ ಎನ್ ಎ ಹ್ಯಾರಿಸ್: Thank you sir.

ಶ್ರೀ ಬಿ ಶ್ರೀರಾಮುಲು: BPL card ವಿಷಯ ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಗೆ ಸಂಬಂಧಿಸಿದ್ದಾಗಿದೆ. ಅದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳ ಜೊತೆ ಮಾತನಾಡಿ ನಿರ್ಣಯ ತೆಗೆದುಕೊಳ್ಳುತ್ತೇವೆ.

ಶ್ರೀ ಪಿ ಎಂ ನರೇಂದ್ರ ಸ್ವಾಮಿ: ಸನ್ಮಾನ್ಯ ಸದಸ್ಯರಾದ ಅಭಯಚಂದ್ರ ಜೈನ್ ರವರು ಕೇಳಿದ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಒದಗಿಸಲಾಗಿದೆ. ಪೂರಕ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ, ಈಗಾಗಲೇ cabinet ನಲ್ಲಿ ಇದು ತಿರಸ್ಕಾರವಾಗಿರುವುದರಿಂದ ಮತ್ತೊಮ್ಮೆ ಇದನ್ನು ಪರಿಶೀಲನೆ ಮಾಡುವುದಕ್ಕೆ ನಾವು ಕ್ರಮವಹಿಸುತ್ತೇವೆ.

ಶ್ರೀ ಯು ಟಿ ಖಾದರ್: Income limit ಮಾಡಿದ್ದಾರೆ. ಅವರದು ದಿನಕ್ಕೆ 20 ರೂ. ಸಂಪಾದನೆ ಇದೆ. ಭಿಕ್ಷುಕರಿಗೆ ಇದಕ್ಕಿಂತ ಹೆಚ್ಚು ಹಣ ಬರುತ್ತದೆ.

(ಗೊಂದಲ)

ಅಧ್ಯಕ್ಷರು: ಈ ರೀತಿ ಮಧ್ಯೆ ಮಧ್ಯೆ ಎದ್ದು ಏಕೆ ಮಾತನಾಡುತ್ತೀರಿ?

(ಗೊಂದಲ)

ಅಧ್ಯಕ್ಷರು: ತಾವು ಕುಳಿತುಕೊಳ್ಳಿ. ನೀವು ಅನುಮತಿ ತೆಗೆದುಕೊಳ್ಳದೆ ಮಾತನಾಡುತ್ತಿರಲ್ಲಾ.

ಶ್ರೀ ಟಿ ಬಿ ಜಯಚಂದ್ರ: ರಾಜ್ಯದ ಎಲ್ಲ ಜನರ ಗಮನ ಸೆಳೆಯುವ ಒಂದು ಪ್ರಯತ್ನ.

ಅಧ್ಯಕ್ಷರು: Demands ಚರ್ಚೆಗೆ ಬಂದಾಗ ಇದರ ಬಗ್ಗೆ ಹೇಳಿ.

ಶ್ರೀ ಟಿ ಬಿ ಜಯಚಂದ್ರ: ವಾರ್ಷಿಕ 6 ಸಾವಿರ ರೂಪಾಯಿ ಎಂದು ಹೇಳಿದ್ದಾರೆ. Physically handicapped ಅಂದರೆ ಕುರುಡರಿಗೆ ಏಕೆ ವರಮಾನದ ಲಿಮಿಟ್ ಇಡಬೇಕು? ದಯಮಾಡಿ ಅರ್ಥಮಾಡಿಕೊಳ್ಳಬೇಕು. Physically handicapped ಎಂದರೆ ಅವರೇ ಒಂದು ಸಂಸಾರ, ಅವರೇ ಅವರ ತಂದೆತಾಯಿಗೆ ಹೊರೆ, ರಾಜ್ಯಕ್ಕೆ ಹೊರೆ. ಅವರಿಗೆ income limit ಮಾಡಬೇಡಿ. Physically handicapped ಯಾವ ಜಾತಿಗೆ ಸೇರಿದರೂ ಕೂಡ ಅವರಿಗೆ income limit ಇಲ್ಲದೆ ನೀವು ಸವಲತ್ತು ಕೊಡುವುದಕ್ಕೆ ಚಿಂತನೆ ಮಾಡಬೇಕು. ಮಂತ್ರಿಗಳಾದ ನೀವು ಉತ್ತರ ಕೊಡಬೇಕಾದರೆ ಸ್ವಲ್ಪ ಯೋಚನೆ ಮಾಡಬೇಕು. ಪರಿಶೀಲನೆ ಮಾಡಿಯೇ ಉತ್ತರ ಕೊಡಬೇಕಲ್ಲವೇ? 2009–10ನೇ ಸಾಲಿನಲ್ಲಿ ಪರಿಶೀಲಿಸಿ ತಿರಸ್ಕರಿಸಲಾಗಿದೆ ಎಂದು ಹೇಳಿದ್ದೀರಿ? ಇದೇನು ಉತ್ತರ? ಏಕೆ ಈ ರೀತಿ ಉತ್ತರ ಕೊಡುತ್ತೀರಿ? ಯಾರೋ ಅಧಿಕಾರಿಗಳು ಬರೆದುಕೊಡುತ್ತಾರೆ ಆ ಪ್ರಕಾರ ಹೇಳುವುದೇ? ನೀವು ಇದರ ಹಿನ್ನೆಲೆ ಅರ್ಥಮಾಡಿಕೊಂಡ ಉತ್ತರ ಕೊಡಬೇಕಾಗುತ್ತದೆ. ದಯಮಾಡಿ ಈ ತರಹದ ಉತ್ತರವನ್ನು ಕೊಡುವುದಕ್ಕೆ ಹೋಗಬೇಡಿ.

(ಗೊಂದಲ)

ಶ್ರೀ ಪಿ ಎಂ ನರೇಂದ್ರಸ್ವಾಮಿ: Cabinet ನಿರ್ಣಯನ್ನು ಯಥಾವತ್ತಾಗಿ ಹೇಳಿದ್ದೇವೆ. ಸದನಕ್ಕೆ ಯಾವುದೇ ತಪ್ಪು ಮಾಹಿತಿ ಕೊಟ್ಟಿಲ್ಲ ಎನ್ನುವುದನ್ನು ಗಮನಕ್ಕೆ ತರುವುದಕ್ಕೆ ಇಚ್ಛೇಪಡುತ್ತೇನೆ.

(ಗೊಂದಲ)

ಶ್ರೀ ಯು ಟಿ ಖಾದರ್: ಸಂಧ್ಯಾ ಸುರಕ್ಷಾ ಯೋಜನೆಯಲ್ಲಿ 20 ಸಾವಿರ ರೂಪಾಯಿಗಳ ಲಿಮಿಟಿ ಇದೆ. ಇದಕ್ಕೆ ಏಕೆ ಮಾಡಲಿಕ್ಕೆ ಆಗುವುದಿಲ್ಲ?

ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಬಾಂಡ್ ವಿತರಣೆಯ ಬಗ್ಗೆ

59(381) ಡಾ: ಬಗಲಿ ಸಾರ್ವಭೌಮ ಸಾತಗೌಡ:(ಇಂಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆ ಯಾವ ಸಾಲಿನಲ್ಲಿ ಜಾರಿಗೆ ಬಂತು;

ಆ) ಇಂಡಿ ಮತ ಕ್ಷೇತ್ರದಲ್ಲಿ 2006–07ರಲ್ಲಿ ಎಷ್ಟು ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದರು, ಇದರಲ್ಲಿನ ಫಲಾನುಭವಿಗಳಿಗೆ ಬಾಂಡ್ ನೀಡಲಾಗಿದೆಯೇ;

ಇ) ಇದರಲ್ಲಿ ಎಷ್ಟು ಫಲಾನುಭವಿಗಳಿಗೆ ಬಾಂಡ್ ನೀಡಲಾಗಿಲ್ಲ; ಅದಕ್ಕೆ ಕಾರಣಗಳೇನು ಅವರಿಗೆ ಎಂದು ಬಾಂಡ್ ನೀಡಲಾಗುವುದು?

ಶ್ರೀ ಪಿ ಎಂ ನರೇಂದ್ರ ಸ್ವಾಮಿ(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ರಾಜ್ಯದಲ್ಲಿ ಭಾಗ್ಯಲಕ್ಷ್ಮಿ ಯೋಜನೆಯು 2006–07ನೇ ಸಾಲಿನಿಂದ ಜಾರಿಗೆ ಬಂದಿದೆ.

ಆ) ಇಂಡಿ ಮತ ಕ್ಷೇತ್ರದಲ್ಲಿ 2006–07ನೇ ಸಾಲಿನಲ್ಲಿ ಒಟ್ಟು 2260 ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಅದರಲ್ಲಿ 1743 ಫಲಾನುಭವಿಗಳಿಗೆ ಬಾಂಡ್ ನೀಡಲಾಗಿದೆ.

ಇ) 517 ಫಲಾನುಭವಿಗಳಿಗೆ ಬಾಂಡ್ ನೀಡಲಾಗಿಲ್ಲ. ದಿನಾಂಕ:1.04.2006ರಿಂದ ಜನಿಸಿದ ಮಕ್ಕಳ ಮಾಹಿತಿಯನ್ನು ಬಿಜಾಪುರ ಜಿಲ್ಲೆಯ ಇಂಡಿ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ, ಅನೇಕ ಸಂದರ್ಭಗಳಲ್ಲಿ ಮಕ್ಕಳಿಗೆ ನಾಮಕರಣ ಅಗದೆ ಹೆಸರನ್ನು ಸೂಚಿಸದೆ ಕೇವಲ ಹೆಣ್ಣು ಮಗು ಎಂದು ಮಾಹಿತಿ ಬಂದಿದ್ದರಿಂದ, ಇಂತಹ ಸಂದರ್ಭಗಳಲ್ಲಿ ಒಂದೇ ಮಗುವಿನ ಹೆಸರು 2 ಬಾರಿ ಪುನರಾವರ್ತನೆಯಾಗಿದ್ದ ಸಂದರ್ಭದಲ್ಲಿ 2 ಬಾಂಡ್‌ಗಳು ಬಂದಿರುವ ಪ್ರಸಂಗಗಳು ಕಂಡು ಬಂದಿರುತ್ತವೆ. ಇದನ್ನು ಸರಿಪಡಿಸಲು ಮರು